ಒಂದೊಂದು ಗುಣಗಳನ್ನು ಹೇಳಿ ಹೊಗಳಿದರು. ಅಷ್ಟು ಮೂರ್ಖರಾ ಅಸ್ಸಾಮೀಸ್? ಅಸ್ಸಾಮೀಸ್‌ಗೆ ಅವಮಾನ ಅದು. ಅವರು ಎಂಆರ್‌ಎ ಅಂತ ಒಂದು ಎನ್‌ಜಿಒನಲ್ಲಿ ಕೆಲಸ ಮಾಡೋರು. ಇದು ಜಾನ್ ಬಕಮನ್ ಅಂತ ಅಮೆರಿಕನ್ ಕಮ್ಯುನಿಸ್ಟರ ಬಗ್ಗೆ ವಿಷಕಾರುವ ವ್ಯಕ್ತಿ ಸ್ಥಾಪಿಸಿದ್ದು'' ಎಂದು ಕಟುವಾಗಿ ಟೀಕಿಸಿದರು. ಖಂಡಿತವಾಗಿ ಮಾತಾಡುವುದು ಅವರ ಗುಣವಾಗಿತ್ತು. ಸೈದ್ಧಾಂತಿಕವಾಗಿ ಅವರಿಗೆ ಕೆಲವು ವಿಚಾರ ಮತ್ತು ವ್ಯಕ್ತಿಗಳ ಬಗ್ಗೆ ನಿಷ್ಠುರ ಗ್ರಹಿಕೆಗಳಿದ್ದವು.

ಪ್ರಭಾಕರ ಅವರ ಮನೆಯೊಂದು ಗ್ರಂಥಾಲಯವಾಗಿತ್ತು. ಅವರು ಮೇಜಿನ ಸುತ್ತಮುತ್ತ ಕೈಗೆಟಕುವಂತೆ ತಮಗೆ ಪ್ರಿಯವಾದ ಪುಸ್ತಕಗಳನ್ನು ಇಟ್ಟುಕೊಂಡು ಮತ್ತೆಮತ್ತೆ ಓದುತ್ತಿದ್ದರು. ಪಂಪ, ಮಂಗರಸ, ಕುಮಾರವ್ಯಾಸ, ಶೇಕ್ಸ್‌ಪಿಯರ್, ಬೇಂದ್ರೆ, ರಾಜರತ್ನಂ ಅವರ ಪ್ರಿಯವಾದ ಲೇಖಕರು. ಆಹಾರ ಸಂಸ್ಕೃತಿ, ರಾಜಕಾರಣ, ಆಧುನಿಕ ಆಫ್ರಿಕಾದ ಚರಿತ್ರೆ ಅವರ ಇಷ್ಟದ ವಿಷಯಗಳು. ಅವರು ಪಂಚಾಂಗಗಳನ್ನು ಸಹ ಓದುತ್ತಿದ್ದರು. ಈ ಪಂಚಾಂಗಗಳಲ್ಲಿರುವ ರಥೋತ್ಸವ, ಹಬ್ಬಗಳ ವಿವರಗಳು ಕರ್ನಾಟಕದ ಸಾಂಸ್ಕೃತಿಕ ಸಮೃದ್ಧತೆಯನ್ನು ಪ್ರಕಟಿಸುತ್ತವೆಯೆಂದು ಹೇಳುತ್ತಿದ್ದರು. ಆಫ್ರಿಕಾದ ಚರ್ಚೆ ಬಂದಾಗ ಮೈಮರೆಯುತ್ತಿದ್ದರು. ಒಮ್ಮೆ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ಸಿನ ಹೋರಾಟಗಾರ ಮಂಡೇಲಾರ ಸಂಗಾತಿ ಅಹಮದ್ ಕಥ್ರಡಾರ ಆತ್ಮಕಥೆಯನ್ನು ಎತ್ತಿಕೊಂಡು, ಗುರುತು ಮಾಡಿಟ್ಟ ಪುಟವನ್ನು ಕೊಟ್ಟು, 'ಇದನ್ನು ಗಟ್ಟಿಯಾಗಿ ಓದು' ಎಂದರು. ಅದರಲ್ಲಿ ದಕ್ಷಿಣ ಆಫ್ರಿಕಾದ ಬಿಳಿಯ ಪೊಲೀಸರು ಜೈಲಿನಲ್ಲಿ ಕಥ್ರಡಾರ ದೇಹಕ್ಕೆ ಕೊಟ್ಟ ಚಿತ್ರಹಿಂಸೆಯ ವಿವರಗಳಿದ್ದವು. ಅವನ್ನು ಓದುತ್ತ ಒಮ್ಮೆಗೆ ನಿಲ್ಲಿಸಿಬಿಟ್ಟೆ. ನನ್ನ ಮೈಕಂಪಿಸಿ ಕಣ್ಣಲ್ಲಿ ನೀರುಕ್ಕಿದವು. ಪ್ರಭಾಕರ ಆಫ್ರಿಕನ್ನರ ಹಿಂಸೆಯನ್ನು ತಾವೇ ಅನುಭವಿಸುತ್ತಿರುವಂತೆ ಬಹಳ ಹೊತ್ತು ಮೌನವಾಗಿಬಿಟ್ಟರು.

ಅಧ್ಯಾಪಕ ಅಥವಾ ಪತ್ರಕರ್ತನೊಬ್ಬ ತಾನು ವೃತ್ತಿಯ ಕಾರಣಕ್ಕೆಂದು ಭೇಟಿಕೊಡುವ ಅಪರಿಚಿತ ಪ್ರದೇಶದ ಭಾಷೆಯ ಜನಾಂಗದ ಸುಖದುಃಖಗಳ ಭಾಗವಾಗಿಬಿಡುವುದು ಅಪರೂಪದ ವಿದ್ಯಮಾನ. ಪ್ರಭಾಕರ ಒಬ್ಬ ಮಾರ್ಕ್ಸಿಸ್ಟ್ ಆಗಿದ್ದು, ಅಂತರರಾಷ್ಟ್ರೀಯ ರಾಜಕೀಯ ಪ್ರಜ್ಞೆಯುಳ್ಳ ಮಾನವತಾವಾದಿ ಆಗಿದ್ದರು. ಅವರಿಗೆ ಅಸ್ಸಾಮಿನ ಬಗ್ಗೆ ಇರುವ ತಿಳಿವಳಿಕೆಯನ್ನು ಮನಗಂಡೇ, 'ದಿ ಹಿಂದೂ' ಪತ್ರಿಕೆಯು ಸಂಘರ್ಷದಿಂದ ಕುದಿಯುತ್ತಿದ್ದ ಆ ನಾಡಿನ ವರದಿ ಮಾಡಲು ನೇಮಿಸಿತು. ಪ್ರಭಾಕರ ಅವರು ವಸಾಹತು ಆಳ್ವಿಕೆಯಿಂದ ವಿಮೋಚನೆಗೊಂಡ ದಕ್ಷಿಣ ಆಫ್ರಿಕಾಕ್ಕೆ ಹೋಗಿ ಅಲ್ಲಿನ ವಿದ್ಯಮಾನಗಳನ್ನು ವರದಿ ಮಾಡುತ್ತಿರುವಾಗಲೇ, ಪ್ರಥಮ ಅಧ್ಯಕ್ಷರಾಗಿದ್ದ ನೆಲ್ಸನ್ ಮಂಡೇಲಾರ ಸಂದರ್ಶನ ಮಾಡಿದರು. ಅಲ್ಲಿದ್ದ ಎಂಟು ವರ್ಷ, ಅವರು ವರ್ಣಭೇದದ ದಾರುಣವಾದ ಅನುಭವಗಳನ್ನು ದಾಖಲಿಸುವ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ಸಿನ ಯೋಜನೆಯಲ್ಲಿ ತೊಡಗಿಸಿಕೊಂಡರು. ಆಫ್ರಿಕಾದ ವರ್ಣಭೇದ ನೀತಿಯ ಹಿಂಸಾತ್ಮಕ ವರದಿಗಳ ಈ ದಾಖಲೆ ಆರಂಭವಾಗುವುದು, ಪ್ರಭಾಕರ್ ಅವರ 'ವಾಯ್ಸಸ್' ಎಂಬ ಕವಿತೆಯ ಹಾಗೂ ನೊಬೆಲ್ ಪ್ರಶಸ್ತಿ ವಿಜೇತ ಡೆಸ್ಮಂಡ್ ಟುಟೂ ಅವರ ಹೇಳಿಕೆಯ ಮೂಲಕ. ಕನ್ನಡಿಗನ ಬರಹವೊಂದಕ್ಕೆ ಸಿಕ್ಕ ಪರಮೋಚ್ಚ ಮನ್ನಣೆಯಿದು. ಆದರೆ ಅಸ್ಸಾಮಿನ ಆಫ್ರಿಕೆಯ ನೋವುನಲಿವುಗಳ ಜೊತೆ ಲೀನವಾದಂತೆ, ಅವರಿಗೆ ಕರ್ನಾಟಕದ ವಿದ್ಯಮಾನಗಳಲ್ಲಿ ತೊಡಗಿಕೊಳ್ಳುವುದು ಸಾಧ್ಯವಾಗಲಿಲ್ಲ. ಇದಕ್ಕೆ ಮುಪ್ಪು ಅಡ್ಡಿಯಾಯಿತೋ, ವಾನಪ್ರಸ್ಥಾಶ್ರಮಿಯಾಗಿ ಅವರೇ ವಿಮುಖಗೊಂಡರೋ, ಕರ್ನಾಟಕವೇ ಅವರನ್ನು ಗುರುತಿಸಿ ಒಳಗು ಮಾಡಿಕೊಳ್ಳಲಿಲ್ಲವೋ ಸ್ಪಷ್ಟವಾಗುವುದಿಲ್ಲ. ಅಸ್ಸಾಮನ್ನು ಬಿಟ್ಟು ಬರುವಾಗ ಆದ ಸಂಕಟಗಳನ್ನು ಆರ್ತವಾಗಿ ಬರೆದುಕೊಂಡಿರುವ ಅವರ 'ಹೊರಗಿನವನಾಗಲಿರುವ ಹೊರಗಿನವ' ಪ್ರಬಂಧ ಹೀಗೆ ಮುಗಿಯುತ್ತದೆ: 'ಕರ್ನಾಟಕದಿಂದ ಈ ಪ್ರಾಂತ್ಯಕ್ಕೆ ಬಂದಾಗ ಹೊರಗಿನವನಾಗಿ ಬಂದೆ. ಹೆಚ್ಚುಕಮ್ಮಿ ಅರ್ಧಶತಮಾನದ ನಂತರ ಈ ಪ್ರಾಂತ್ಯದಿಂದ ಒಬ್ಬ ಹೊರಗಿನವನಂತೆ ಕೋಲಾರಕ್ಕೆ ವಾಪಸಾಗುತ್ತಿದ್ದೇನೆ. ಅಂದೂ ಹೊರಗಿನವ, ಇಂದೂ ಹೊರಗಿನವ.'

## 3

ಪ್ರಭಾಕರ ಅವರನ್ನು ಹತ್ತಾರು ಬಾರಿ